ಕುಲಸ್ಥನೊಬ್ಬ ಆಸ್ಪತ್ರೆಯ ಅಟೆಂಡರ್ ಆಗಿದ್ದ. ನಾನು ಆತನ ಜೊತೆ ಇರುತ್ತಿದ್ದುದರಿಂದ ಕರಗ, ಪೋತರಾಜು ಗಾವು ಇವನ್ನೆಲ್ಲ ಹತ್ತಿರದಿಂದ ನೋಡಲು ಸಾಧ್ಯವಾಯಿತು. ಚಿಕ್ಕ ವಯಸ್ಸಿನಲ್ಲಿ ನೋಡಿದ ಆ ಜಾತ್ರೆಗಳು, ಸಂತೆಗಳು, ಅಲ್ಲಿ ನಡೆಯುತ್ತಿದ್ದಂಥ ಜನಪದ ಆಚರಣೆಗಳು ಅವೆಲ್ಲ ನನ್ನ ಮೇಲೆ ಅಪಾರ ಪ್ರಭಾವ ಬೀರಿದವು.

◆ **ನಿಮ್ಮ ವಿದ್ಯಾಭ್ಯಾಸದ ಬಗ್ಗೆ ಹೇಳಿ. ನಿಮ್ಮ ತಂದೆ ವೈದ್ಯರಾಗಿದ್ದರಿಂದ ಮಗನೂ ತನ್ನಂತೆ ವೈದ್ಯನಾಗಲಿ ಎನ್ನುವ ಒತ್ತಡವೇನಾದರೂ ಇತ್ತೆ?**

ಒತ್ತಡ ಅಷ್ಟೇ ಅಲ್ಲ... ಹಿಂಸೆಯೇ ಇತ್ತು. ನನ್ನನ್ನು ಸೈನ್ಸ್‌ಗೆ ಸೇರಿಸಿ ಡಾಕ್ಟರ್ ಮಾಡಲೇಬೇಕೆಂದು ತುಂಬಾ ಪ್ರಯತ್ನಪಟ್ಟು ನನ್ನ ಮೇಲೆ ಒತ್ತಡ ಹೇರಿದ್ದರು. ನಾನೂ ಕೂಡ ಅದನ್ನು ಅಷ್ಟೇ ತೀವ್ರವಾಗಿ ರೆಸಿಸ್ಟ್ ಮಾಡಿದೆ. ನನಗೆ ಬೇಸಿಕಲಿ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ. ಐದನೇ ಕ್ಲಾಸಿಗೇ ಪದ್ಯ ಬರೆದಿದ್ದೆ. ಆಗ ಶಿಕ್ಷಣ ಇಲಾಖೆಯವರು ಪ್ರಕಟಿಸುತ್ತಿದ್ದ 'ಬಾಲವಾಣಿ' ಮಾಸಿಕದಲ್ಲಿ ಆ ಪದ್ಯ ಪ್ರಕಟಗೊಂಡಿತ್ತು. ಎಂಟನೇ ಕ್ಲಾಸಿಗೆ ಬೆಂಗಳೂರಿಗೆ ಬಂದು ಹಾಸ್ಟೆಲು ಸೇರಿದೆ. ಆಗಲೇ ಒಂದು ಪತ್ತೆದಾರಿ ಕಾದಂಬರಿ ಬರೆದಿದ್ದೆ. ಒಂಬತ್ತು, ಹತ್ತನೇ ಕ್ಲಾಸಿಗೆ ಬರುವ ಹೊತ್ತಿಗೆ ನಾನೇ ನಾಟಕ ಬರೆದು ಆಡಿಸೋದಕ್ಕೆ ಶುರು ಮಾಡಿದೆ. ಮುಂದೆ ಸಾಹಿತ್ಯವನ್ನೇ ಓದಬೇಕು ಎನ್ನುವ ಇರಾದೆಯಿತ್ತು. ಆದರೆ ಕೋಲಾರದಲ್ಲಿ ಪಿಯು ಓದುವಾಗ ಚಳವಳಿಗಳ ಸಂಪರ್ಕಕ್ಕೆ ಬಂದೆ. ಅಲ್ಲಿಗೇ ನನ್ನ ಔಪಚಾರಿಕ ಶಿಕ್ಷಣ ಕೊನೆಗೊಂಡಿತು.

> **ಬಾಲ್ಯದಲ್ಲಿ ಜಗತ್ತನ್ನು ನೋಡುವ ನನ್ನ ನೋಟಕ್ರಮವನ್ನು ರೂಪಿಸಿದ್ದೇ 'ಚಂದಮಾಮ'. ಬಾಲ್ಯದಲ್ಲಿ ನಮ್ಮ ಮನಸ್ಸಲ್ಲಿ ಯಾವ ಬೀಜ ಬೀಳುತ್ತದೋ ಅದೇ ಮುಂದೆ ಬದುಕನ್ನು ರೂಪಿಸುತ್ತದೆ ಎನ್ನುತ್ತಾರಲ್ಲ, ನನ್ನ ವಿಚಾರದಲ್ಲೂ ಹಾಗೇ ಆಯಿತು.**

◆ **ನಿಮಗೆ ಸಾಹಿತ್ಯದ ನಂಟು ಬೆಳೆದಿದ್ದು ಹೇಗೆ? ಅದಕ್ಕೆ ಯಾರು ಕಾರಣ?**

ಆಗಲೇ ದೇವರಾಯಸಮುದ್ರ ಎನ್ನುವ ಹಳ್ಳಿಯ ಬಗ್ಗೆ ಹೇಳಿದೆನಲ್ಲ... ಆ ಹಳ್ಳಿಯಲ್ಲಿ ಅಯ್ಯರ್ ಕುಟುಂಬಗಳೇ ಹೆಚ್ಚು. ಅಲ್ಲಿನ ಮನೆಮನೆಗೂ 'ಚಂದಮಾಮ' ಪತ್ರಿಕೆ ಬರುತ್ತಿತ್ತು. ಬಾಲ್ಯದಲ್ಲಿ ನನ್ನ ಮೇಲೆ ಅತಿಹೆಚ್ಚು ಪ್ರಭಾವ ಬೀರಿದ್ದು, ಜಗತ್ತನ್ನು ನೋಡುವ ನೋಟಕ್ರಮವನ್ನು ರೂಪಿಸಿದ್ದೇ 'ಚಂದಮಾಮ' ಎನ್ನಬಹುದು. 'ಚಂದಮಾಮ'ದ ಒಂದು ವಿಶೇಷ ಏನೆಂದರೆ, ಅದರ ಎಲ್ಲ ಕಥೆಗಳು ಮಾನವೀಯತೆ ಮತ್ತು ನೈತಿಕತೆಯನ್ನು ಹೇಳುತ್ತವೆ. ಬಾಲ್ಯದಲ್ಲಿ ನಮ್ಮ ಮನಸ್ಸಲ್ಲಿ ಯಾವ ಬೀಜ ಬೀಳುತ್ತದೋ ಅದೇ ಮುಂದೆ ನಮ್ಮ ಬದುಕನ್ನು ರೂಪಿಸುತ್ತದೆ ಎನ್ನುತ್ತಾರಲ್ಲ, ನನ್ನ ವಿಚಾರದಲ್ಲೂ ಹಾಗೇ ಆಯಿತು. ಮುಂದೆ ದ್ವಿತೀಯ ಪಿಯು ಹೊತ್ತಿಗೆ ನನಗೆ ಕೋಟಿಗಾನಹಳ್ಳಿ ರಾಮಯ್ಯ ಅವರ ಪರಿಚಯ ಆಯಿತು. ಅದರ ಜೊತೆಗೆ ಒಳ್ಳೆಯ ಮೇಷ್ಟ್ರುಗಳು ಸಿಕ್ಕರು. ಕನ್ನಡದ ಅತ್ಯುತ್ತಮ ಗದ್ಯ ಬರಹಗಾರರೂ ಶ್ರೇಷ್ಠ ಪ್ರಬಂಧಕಾರರೂ ಆಗಿದ್ದ ಎಚ್.ಜಿ. ಸಣ್ಣಗುಡ್ಡಯ್ಯ ಹಾಗೂ ಎನ್.ಬಿ. ಚಂದ್ರಮೋಹನ್ ನನಗೆ ಮೇಷ್ಟ್ರಾಗಿ ಸಿಕ್ಕಿದ್ದರು. ಅವರಿಬ್ಬರೂ ಮಾರ್ಕ್ಸಿಸ್ಟ್‌ಗಳೇ ಆಗಿದ್ದದ್ದು ನನ್ನನ್ನು ಹೋರಾಟಗಾರನನ್ನಾಗಿ ರೂಪಿಸುವಲ್ಲಿ ನೆರವಾಯಿತು. ಅವರಿಬ್ಬರ ಮಾರ್ಗದರ್ಶನದಿಂದ ಪಿಯು ಹೊತ್ತಿಗಾಗಲೇ ಫ್ರೆಂಚ್ ಕವಿ ಬೋದಿಲೇರನ ಪದ್ಯಗಳನ್ನು ಓದತೊಡಗಿದ್ದೆ. ನನ್ನ ಕೈಯಲ್ಲಿ ಲಂಕೇಶರ 'ಪಾಪದ ಹೂಗಳು' ಕೃತಿ ನೋಡಿದ ಚಂದ್ರಮೋಹನ್, ನನ್ನನ್ನು ಮನೆಗೆ ಕರೆದೊಯ್ದು